ಗೊತ್ತಾಗಿದ್ದು. ಅವಳೆಂದೂ ಆ ಬಗ್ಗೆ ಹೇಳಿರಲಿಲ್ಲ. ಕೇಳುವ ಪ್ರಮೇಯವೂ ಬಂದಿರಲಿಲ್ಲ.

'ಇಲ್ ಕೇಳ್ರೀ ಸರ್, ಪೂರ್ವ ಕಾಲ್ದಾಗ ಇವ್ರ ದೇಶ್ಗತಿ ವಾಡೆಯವ್ರು ಸಾಲ ಮಾಡಿದ್ರಂತ. ಬರಗಾಲ ಬಂದು ಬಾಕಿ ತೀರಿಸ್ಲಾಕ ಆಗ್ದೆ, ನೂರಿಪ್ಪತ್ತೈದು ಎಕ್ರೀ ಜಮೀನು ಹರಾಜಾಗ ಬೇಕ್ರಿ ಅಂತ ಡಿಕ್ರೀ ಬಂದಿತ್ತಂತಾ. ಹೇಳಿದ ಟೈಮ್ಗೆ, ಹೇಳಿದ ಮಾತಿನಂಗ ಸಾಲ ತೀರಿಸಿದ್ರು... ಹೆಂಗೆ? ಅಂದ್ರೆ, ನಮ್ ತಾತ ಸಹಾಯಕ ಬಂದ್ರು. ಸಾವ್ರಾರು ಕುರಿಗಳ್ನ ಮಾರಿ ಸಾಲ ತೀರಿಸಿದ್ರು. ಆಮ್ಯಾಲ ಸಾವ್ಕಾರ್ರು ಎಲ್ಲಾ ಅಸಲು ಚುಕ್ತಾ ಮಾಡಿದ್ರು, ಅದು ಬ್ಯಾರೆ ಕತಿ ಬಿಡ್ರೀ... ಆಗಿಂದಾ ದೇಶ್ಗಗತಿ ಮನೆತನ ಅಂದ್ರ ನಮಗ ಭಾಳ ಗೌರವ ಐತ್ರಿ...' ಆತ ಇನ್ನೇನು ಹೇಳುತ್ತಿದ್ದನೋ! ವಾಡೆ ತಲುಪಿದ್ದೆವು.

ಗುತ್ತೇದಾರನ ಮಾತಿನಷ್ಟೇ ಭವ್ಯ ಮನೆತನದ ಗತಕಾಲದ ಚರಿತ್ರೆಯನ್ನು ಮೆಲುಕು ಹಾಕಿದೆವು. ಅದ್ಭುತ ಸಂಸ್ಕೃತಿಯೊಂದರ ವರ್ತಮಾನದ ಜೊತೆ ತುಲನೆ ಮಾಡಿದ್ದು ಹಾಗಿರಲಿ, ವಾಡೆಯ ಒಡತಿ ಮಾಯಿಯ ವೈಭವ, ಅದ್ಭುತ ಸೌಂದರ್ಯದ ಬದುಕಿಗೆ ಸೂರಿ, ಸಾಜಿದಾ ನಿಬ್ಬೆರಗಾಗಿದ್ದನ್ನು ಇಲ್ಲಿ ದಾಖಲಿಸಲಾರೆ. ಪತಿ ಕುಲಕರ್ಣಿಯ ಸಜ್ಜನಿಕೆಯನ್ನೂ ಓದುಗರ ಮುಂದೆ ಹಂಚಿಕೊಳ್ಳಲಾರೆ. ನಾವು ವಾಡೆಯೊಂದರಲ್ಲಿ ಮೂರ ದಿನ ಮೂರು ನಿಮಿಷದಂತೆ ಕಳೆದೆವು. ಬೆಳಗ್ಗೆ ಮತ್ತು ಸಂಜೆಯ ವೇಳೆ ನನಗೂ ಮಾಯಿಗೂ ವಿಶೇಷ ಚರ್ಚೆ! ಸೂರಿ, ಸಾಜಿದಾ ಮೌನಿಗಳಾಗಿದ್ದರೆ, ಕುಲಕರ್ಣಿಯವರು ಜಡ್ಜ್‌ಗಳಂತೆ ಒಳಿತು ಕೆಡುಕು ವಿಶ್ಲೇಷಿಸುತ್ತಿದ್ದರು. ಅವರೂ ಸಾಹಿತ್ಯದ ಸವ್ಯಸಾಚಿಗಳಾಗಿದ್ದರಿಂದ ಯಾವುದೇ ವಿಷಯಕ್ಕೂ ಸಂಕುಚಿತಾರ್ಥವೇ ಇರುತ್ತಿರಲಿಲ್ಲ. ಕನ್ನಡದ ಪ್ರಸಿದ್ಧ ಕತೆ 'ಬೇಲ', 'ಹಂಗಿರಮನೆಯ ಹೊರಗೆ'; 'ವೆಂಕಟಸಾಮಿಯ ಪ್ರಣಯ' ಮುಂತಾದ ಕತೆಗಳಲ್ಲಿ ಅಡಗಿದ್ದ ಪ್ರೀತಿ, ದುರಂತಾವಸ್ಥೆಯನ್ನು ಮಾಯಿ ಮತ್ತೆ ಮತ್ತೆ ನೆನಪಿಗೆ ತರಲು ಯತ್ನಿಸುತ್ತಿದ್ದಳು. ಪೂರಕವಾಗಿ ನಾನು ಕೂಡ ಕತೆಯ ಸ್ಥಾಯಿ ಭಾವ, ಪಾತ್ರಗಳ ಮಹೋನ್ನತಿಯ ಅವಸ್ಥೆಯನ್ನೂ ವಿಶ್ಲೇಷಿಸಿದಾಗ ಆಕೆಯ ಕೆನ್ನೆಯ ಮೇಲೆ ಚಂದಿರ ಮೂಡಿದ್ದು ಸ್ವಪ್ನವೋ, ವಾಸ್ತವವೋ!

ಕುಲಕರ್ಣಿ ಅವರೂ 'ಜರತಾರೀ ಜಗದ್ಗುರು','ಮಲೆಗಳಲ್ಲಿ ಮದುಮಗಳು' ಕಾದಂಬರಿಗಳ ಬಗ್ಗೆ ಮಾತನಾಡಿದ್ದು ಸಕಾಲವಾಗಿತ್ತು. ವಾಡೆಯ ಅರಮನೆಯಂತಹ ದರ್ಬಾರು ಮಹಲಿನಲ್ಲಿ ಇಂಥ ಪಾಂಡಿತ್ಯಪೂರ್ಣ ಜಿಜ್ಞಾಸೆ ಎಂಥವರಿಗೆ ತಾನೆ ಇಷ್ಟವಾಗೋಲ್ಲ?!

ನಾವು ಬಂದದ್ದು ಮಾಯಿ ಮನೆತನದವರಿಗೆ ಕೋಟಿ ಕೋಟಿ ಖುಷಿ ಅನ್ನಿಸಿತ್ತು ಖರೆ. ಪುನಃ ನಾವು ಬೆಂಗಳೂರಿಗೆ ಹೋಗುವ ದಿನ ಬಂದಾಗ ಮಿಲಿಯನ್‌ಗಟ್ಟಲೆ ದುಃಖವಾಗಿದ್ದನ್ನು ನೆನೆಯಲಾಗದು. ಕುಲಕರ್ಣಿಯವರು ನನ್ನ ಕೈ ಹಿಡಿದು 'ನೀವು ಇದ್ದಷ್ಟು ದಿನ ನಮ್ಮ ಮನಿ ದೀಪ ಬೆಳಗಿತ್ತು. ಹೋಗೋರ್ನ ತಡೀಲಿಕ್ಕಾಗದು. ಆದ್ರ ಮಾಯಿ ಇಚ್ಛೆಯಂತೆ ಇನ್ನೆರಡು ದಿನ ದಯವಿಟ್ಟು ಇರ್ರಿ. ಆಲಮಟ್ಟಿ ಜಲಾಶಯ, ವಿಜಾಪುರದ ಗೋಲ್ಗುಂಬುಜ ನೋಡಿ ಹೋಗ್ರೀ. ಪ್ಲೀಸ್...' ನನಗೆ ಇಲ್ಲಿರಲು, ಮಾಯಿಯ ಭಾವ ಸಾಮೀಪ್ಯದ ಜೊತೆ ಬೆರೆಯಲು ಯಾವುದೇ ತಕರಾರು ಇರಲಿಲ್ಲ. ಸೂರಿ ಮಾತ್ರ ಹೋಗಲೇಬೇಕಿತ್ತು. ಈ ಸಂದಿಗ್ಧ ಸ್ಥಿತಿಯನ್ನು ಮನವರಿಕೆ ಮಾಡುವುದು ಹೇಗೆ? ಕಣ್ಣಂಚಿನ ಮಿಂಚನ್ನೂ ಅಳೆಯುವ ಮಾಯಿ ಮಧ್ಯ ಪ್ರವೇಶಿಸಿ, 'ಸಾವೂ ಕೂಡ ಸ್ನೇಹ ಕಂಡು ಈರ್ಷೆ ಪಡುತ್ತಿರುವಾಗ ಇಲ್ಲಿ ಯಾವುದು ಶಾಶ್ವತ?' ಅಂತ ಗುಡುಗು ಸಿಡಿಲಾದಳು. ಅವಳ ಈ ವರ್ತನೆಗೆ ಕರಗಿದ ಸಾಜಿದಾ, ಸೂರಿಯ ಮನವೊಲಿಸಿದಳು. ಮತ್ತೆರಡು ದಿನ ಹೇಗೆ ಕಳೆದೆವೋ. ಗೋಲಗುಂಬಜದಲ್ಲಿ 'ಮಾಯಿ' ಅಂತ ಗಟ್ಟಿಯಾಗಿ ಕೂಗಿದ್ದೂ, ಅದರ